## ದ್ವಿತೀಯ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್–2026

## ವಿಷಯ : ಕನ್ನಡ (01)

**ಸಮಯ : 3 ಗಂಟೆಗಳು** **ಅಂಕಗಳು : 80**

**ಸೂಚನೆ :**

**"ಅ–ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

### ಅ–ವಿಭಾಗ

**I ಅ. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** **10x1=10**

1. ರಾವಣನಿಗೆ ಹಿತವನ್ನು ಹೇಳಿದವನು ಯಾರು ?
   ಅ) ರಾಮ ಆ) ಲಕ್ಷ್ಮಣ ಇ) ವಿಭೀಷಣ ಈ) ಹನುಮಂತ

2. ಗುರು ಹೇಗೆ ವರ್ತಿಸಬಾರದು?
   ಅ) ಲಘುವಾಗಿ ಆ) ಘನವಾಗಿ ಇ) ಆಸೆಯಿಂದ ಈ) ದುಃಖದಿಂದ

3. 'ರಮಣಿರಿವರೀ ನಾಯ ಕೊಲಲಕ್ಷಮರು ನಿಸ್ಸಂದೇಹವೆಂದಳು ತನ್ನ ಮನದೊಳಗೆ' – ಈ ಸಾಲುಗಳಲ್ಲಿಯ 'ನಾಯಿ' ಪದ ಯಾರನ್ನು ಸಂಕೇತಿಸುತ್ತಿದೆ?
   ಅ) ಭೀಮ ಆ) ನಕುಲ ಇ) ಕೀಚಕ ಈ) ಸಹದೇವ

4. ಯಾವ ಸಮಯದಲ್ಲಿ ಮಳೆ ಬಂದರೆ ಪ್ರಯೋಜನವಿಲ್ಲ?
   ಅ) ಬೆಳೆ ಬಂದಾಗ ಆ) ಪೈರು ಒಣಗಿದ ಮೇಲೆ ಇ) ಬರಗಾಲ ಬಂದಾಗ ಈ) ಬೇಸಗೆ ಬಂದಾಗ

5. ಜಾಲಿಯ ರಸಾಸ್ವಾದ ಹೇಗಿರುತ್ತದೆ ?
   ಅ) ಜೇನಿನಂತೆ ಆ) ವಿಷದಂತೆ ಇ) ಹಾಲಿನಂತೆ ಈ) ಪಾಯಸದಂತೆ

6. ಡಾ. ತಿಮ್ಮಪ್ಪ ಬಸಲಿಂಗನಿಗೆ ಯಾವ ವೈದ್ಯರನ್ನು ನೋಡಲು ಸೂಚಿಸಿದರು?
   ಅ) ಡಾ. ಕಾಳಪ್ಪ ಆ) ಡಾ. ಚಂದ್ರಪ್ಪ ಇ) ಡಾ. ಚಂಗಪ್ಪ ಈ) ಡಾ. ಚನ್ನಪ್ಪ

7. ನಮ್ಮ ಭಾಷೆಯಲ್ಲಿ ಓದಿದ್ರೇ ಮೈಗೆ ಹತ್ತುವುದು, ಆಧುನಿಕ ವಿಜ್ಞಾನವನ್ನು ಕಲಿಯುವುದು, ಕಲಿಸುವುದು, ನಮ್ಮ ಭಾಷೆಗಳ ಮೂಲಕ ಸಾಧ್ಯವಾಗುವುದಿಲ್ಲ ಎನ್ನುವುದು ಒಂದು ಮೂಢನಂಬಿಕೆ. ಕನ್ನಡದ ಮೂಲಕ ಕಲಿತೂ ಶ್ರೇಷ್ಠ ವಿಜ್ಞಾನಿಯಾಗಬಹುದು ಎನ್ನುವುದಕ್ಕೆ ನಮ್ಮವರೇ ಆದ ಡಾ ॥ ಸಿ.ಎನ್.ಆರ್. ರಾವ್ ಅತ್ಯುತ್ತಮ ಉದಾಹರಣೆಯಾಗಿದ್ದಾರೆ. ಈ ಸಾಲುಗಳು ಈ ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತದೆ.
   ಅ) ಶ್ರೇಷ್ಠ ವ್ಯಕ್ತಿಯಾಗಲು ಇಂಗ್ಲೀಷ್ ಬೇಕೇ ಬೇಕು ಆ) ಕನ್ನಡ ಮಾಧ್ಯಮದಲ್ಲಿ ಕಲಿತರೂ ದೊಡ್ಡ ವ್ಯಕ್ತಿಗಳಾಗಬಹುದು
   ಇ) ಇಂಗ್ಲೀಷ್, ಹಿಂದಿ ಭಾಷೆಗಳು ಜೀವನಕ್ಕೆ ಕಡ್ಡಾಯ ಈ) ಡಾ ॥ ಸಿ.ಎನ್.ಆರ್. ರಾವ್ ಇಂಗ್ಲೀಷ್‌ನಲ್ಲಿ ಕಲಿತರು

8. ದುರ್ಗಪ್ಪನ ತರ್ಲೆ ಡಿಪಾರ್ಟ್‌ಮೆಂಟ್ ಎಂದು ಹೇಳಿದ್ದು ಇದರ ಬಗ್ಗೆ.
   ಅ) ಟೆಲಿಫೋನ್‌ಡಿಪಾರ್ಟ್‌ಮೆಂಟ್ ಆ) ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್
   ಇ) ಅಂಚೆ ಡಿಪಾರ್ಟ್‌ಮೆಂಟ್ ಈ) ಫಾರೆಸ್ಟ್ ಡಿಪಾರ್ಟ್‌ಮೆಂಟ್

9. ನಿರೂಪಕರ ಗೆಳೆಯ ಪ್ರಕಾಶ್ ಅವರು
   ಅ) ಸೋಶಿಯಾಲಜಿಸ್ಟ್ ಆ) ಎಕಾನಾಮಿಸ್ಟ್ ಇ) ಇಕಾಲಾಜಿಸ್ಟ್ ಈ) ಸೈಕಿಯಾಟ್ರಿಸ್ಟ್

10. "ನೋಡಿ ಸಾರ್ ಬೆಳ್ಳಗಿರೋದೆಲ್ಲ ಹಾಲೂಂತ ನಂಬೋರು ನೀವು. ಇವೆಲ್ಲ ನೀವು ಹೇಳ್ತಿರೋ ಅಷ್ಟು ಸಿಂಪಲ್ಲಾಗಿಲ್ಲ ಸಾರ್" – ಎಂಬ ಮಾತಿನಲ್ಲಿ ನಿರೂಪಕರನ್ನು ಕುರಿತ ನಾಗರಾಜನ ಮಾತಿನ ಭಾವ.
    ಅ) ನೀವು ಬುದ್ಧಿಹೀನರು, ವಿಷಯ ಸರಳವಾಗಿಲ್ಲ ಆ) ನೀವು ಬುದ್ಧಿವಂತರು, ವಿಷಯ ಸರಳವಾಗಿಲ್ಲ
    ಇ) ನೀವು ಮುಗ್ಧರು, ವಿಷಯ ಸರಳವಾಗಿಲ್ಲ ಈ) ನೀವು ಅತಿ ಬುದ್ಧಿವಂತರು, ವಿಷಯ ಸರಳವಾಗಿಲ್ಲ

**ಆ. ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ :** **5x1=5**

**[ಟಾಟಾ, ಇನ್ಫೋಸಿಸ್, ದ್ವೀಪ ಜೇವಿ, 1890, ಸೀತಾ, ಸುಳ್ಳು)**

11. ಕೊನೆಗೆ ಬಸಲಿಂಗನಿಗೆ __________ ಗಳಿಂದ ಮುಕ್ತವಾಗಿದ್ದ.

12. __________ ರಲ್ಲಿ ಮಾರ್ಷ್ ವಾಲ್ ಪರ್ರೈಗೆ ಬಂದನು.

(ಪು.ತಿ.ನೋ.)

13. ಲೇಖಕಿ ಸಂಶೋಧನೆಗೆಂದು ಸೇರಿದ ಇನ್ಸ್ಟಿಟ್ಯೂಟ್‌ನ ಹೆಸರು ___________

14. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ________ ನೆನಪಾಗುತ್ತಾರೆ.

15. ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ________ ಆಗುತ್ತಾರೆ.

**ಇ. ಹೊಂದಿಸಿ ಬರೆಯಿರಿ:** **5x1=5**

16. ಅ. ಪುಲಿಗೆರೆ ಸೋಮನಾಥ – 1. ಹರ ಹರ ಶ್ರೀಚೆನ್ನ ಸೋಮೇಶ್ವರಾ

ಆ. ಜಾಲಿಯ ಮರದಂತೆ – 2. ಜನಪದ

ಇ. ಹಬ್ಬಲಿ ಅವರ ರಸಬಳ್ಳಿ – 3. ಮುಕ್ತ ಕಂಠ

ಈ. ಬೆಳಗು ಜಾವ – 4. ಜಿ. ಎಸ್. ಶಿವರುದ್ರಪ್ಪ

ಉ. ಮುಂಬೈ ಜಾತಕ – 5. ಪುರಂದರ ದಾಸರು

6. ಕುಮಾರವ್ಯಾಸ

## ಆ–ವಿಭಾಗ

**II ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3x2=6**

17. ಬಹುರೂಪಿಣೀ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು ?
18. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು ?
19. ಯಾರಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ ?
20. ಹಡೆದ ತಂದೆ–ತಾಯಿಯರ ಮಹತ್ವ ತಿಳಿಸಿರಿ.

**ಆ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2x2=4**

21. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು ?
22. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ ?
23. ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು ?
24. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

**ಇ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3x2=6**

25. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು ?
26. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ?
27. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?
28. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ ?

## ಇ–ವಿಭಾಗ

**III ಅ. ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **2x3=6**

29. ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ
30. ಪಲವುಂ ಪಳ್ಳ ಸಮುದ್ರವ್ಮೆ
31. ಬಂಗಾರ ನಿನಗೆ ಸ್ಥಿರವಲ್ಲ

**ಆ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **1x3=3**

32. ನೀರು ಬಿದ್ದರೆ ಕಣ್ಣು ಹೋಗುವ ಅಪಾಯ ಇದೆ.
33. ಅದು ಅವರು ಆವರೆಗೂ ನೋಡಿದರ ಪ್ರಾಣಿ.
34. ಈ ಅದೃಷ್ಟ ನಿನಗೂ ಇತ್ತಲ್ಲೇ

**ಇ. ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **1x3=3**

35. ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.
36. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.

(ಪು.ತಿ.ನೋ)

ಈ–ವಿಭಾಗ

IV **ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2x4=8**

37. ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.
38. ಮಂಗಳಲಿಂಗದ ಮಹತ್ವವನ್ನು ಉರಿಲಿಂಗಪೆದ್ದಿ ಹೇಗೆ ವಿವರಿಸಿದ್ದಾರೆ ?
39. ಜಾಲಿಯ ಮರವು ನಿರುಪಯುಕ್ತವೆಂಬುದನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ ?
40. **ಈ ಕೆಳಗಿನ ಪದ್ಯಭಾಗವನ್ನು ಅರ್ಥೈಯಿಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.**

ಮಂದೆಗೆಳೆಸಿದ ಪಾಪಿ ಕೌರವ
ನಂದು ಮುಂದಲೆವಿಡಿದು ಸೈಂಧವ
ಬಂದು ಬಳಿಕಾರಣ್ಯವಾಸದೊಳೆನ್ನನೆಳೆದೊಯ್ದು
ಇಂದು ಕೀಚಕ ನಾಯ ಕಾಲಲಿ
ನೊಂದೆ ನಾನೀ ಮೂರು ಬಾರಿಯೆ
ಬಂದೆ ಭಂಗವೆ ಸಾಕೆನುತ ಬಸವಳಿದಳಿಂದುಮುಖಿ

ಅ) ಮಂದೆಗೆಳೆಸಿದ ಪಾಪಿ ಯಾರು ? **(1 ಅಂಕ)**
ಆ) ದ್ರೌಪದಿಯನ್ನು ಅರಣ್ಯವಾಸದಲ್ಲಿ ಎಳೆದೊಯ್ದುವರಾರು ? **(1 ಅಂಕ)**
ಇ) ದ್ರೌಪದಿ ಅನುಭವಿಸಿದ ಮೂರು ಅವಮಾನದ ಪ್ರಸಂಗಗಳು ಯಾವುವು? **(2 ಅಂಕ)**

**ಆ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **1x4=4**

41. ಕಣ್ಣು ನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು ?

42 ಅಂತಾರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್ ಪಲೈಗೆ ಒದಗಿದ ಸಮಸ್ಯೆಗಳೇನು ?

**ಇ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **1x4=4**

43. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ ? ವಿವರಿಸಿ.
44. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ.

ಉ–ವಿಭಾಗ (ಭಾಷಾಭ್ಯಾಸ)

V **ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **4x2=8**

45. **ಎರಡು ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.** – ಬಂಗಾರ, ಸುತ, ಧನ
46. **ಎರಡು ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ.** – ಸಹಸ್ರ, ಭಂಗ, ಪಗೆ
47. **ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.** – ಕಲಿಭೀಮ, ರಸಬಳ್ಳಿ, ಎಡಗಣ್ಣು
48. **ಎರಡು ಪದಗಳ ಧಾತು ಗುರುತಿಸಿ.** – ಓದಿದನು, ನಿಂತರು, ಹಿಗ್ಗಿದಳು
49. **ಎರಡು ಪದಗಳ ವಿಭಕ್ತಿ ಗುರುತಿಸಿ.** – ಜಗತ್ರಯದೊಳ್, ಪಾಪಿಗೆ, ಗುಡಿಸಲಿನಿಂದ
50. **ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.** – ರೈಲು ಬಿಡು, ಮೂಗು ತೂರಿಸು, ಕಾಲುಕೀಳು.

**ಆ. ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **1x4=4**

51. ಮತದಾನದ ಜಾಗೃತಿ.

**ಅಥವಾ**

ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸುವ ಮಾರ್ಗಗಳು.

**ಇ. ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ.** **1x4=4**

52. ಸಂಹಿತಾ / ಸುಚೇತನ, ದ್ವಿತೀಯ ಪಿಯುಸಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು ಜಿಲ್ಲೆ, ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ಪೂಜಾ/ಪೃಥ್ವಿ ದ್ವಿತೀಯ ಪಿಯುಸಿ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಣಿಬೆನ್ನೂರು, ಹಾವೇರಿ ಜಿಲ್ಲೆ ಈ ವಿಳಾಸದಲ್ಲಿ ವ್ಯಾಸಂಗ ಮಾಡುತ್ತಿರುವ ನಿಮ್ಮ ಗೆಳೆಯ / ಗೆಳತಿಗೆ ನೀವು ಮಾಡಿರುವ ಪ್ರವಾಸಾನುಭವವನ್ನು ತಿಳಿಸಿ ಪತ್ರ ಬರೆಯಿರಿ.

**ಅಥವಾ**

ವೀಣಾ / ಸಂತೋಷ್, ಇಂಗಳಗಿ ಗ್ರಾಮ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. ಇಲ್ಲಿ ನೀವು ವಾಸವಿದ್ದೀರೆಂದು ಭಾವಿಸಿ ನಿಮ್ಮ ಊರಿಗೆ ಒಂದು ಸುಸಜ್ಜಿತವಾದ ಗ್ರಂಥಾಲಯವನ್ನು ನಿರ್ಮಿಸಿ ಕೊಡುವಂತೆ ವಿನಂತಿಸಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

*****